Regd No. M 1299 SATYAVADI Founded 1917

ಸತ್ಯವಾದಿ

(ಆರಮನೆ ಸಿರಸ್ತೇದಾರ್ ಎಂ. ವಿ. ಸುಬ್ಬಣ್ಣಯ್ಯರಿಂದ ಸ್ಥಾಪಿಸಲ್ಪಟ್ಟದ್ದು)

ಸಂಪುಟ 31 ಸಂಚಿಕೆ 36] ಸೋಮವಾರ 10—11—47 [ಬಿಡಿ ಪ್ರತಿ 3 ಪೈ

ಈ ವಾರದ ಭವಿಷ್ಯ

(ಓಂ ಜ್ಯೋತಿಷ್ಯರಿಂದ)

ಮೇಷ— ಆರ್ಥಿಕ ಸ್ಥಿತಿ ನೆಟ್ಟಗಿರುವುದಿಲ್ಲ. ಕಣ್ಣುಗಳ ಬಲಗೆ ಬೀಳುವಿರಿ. ಆರೋಗ್ಯ ಸ್ವಲ್ಪ ಕೆಟ್ಟೀತು.

ವೃಷಭ.... ಜಯಪ್ರದವಾದ ವಾರ. ಧನಲಾಭವುಂಟು.

ಮಿಥುನ— ಶತ್ರುಗಳನ್ನು ದೂರದಲ್ಲಿಡಿ. ಧನಲಾಭವುಂಟು. ಆರೋಗ್ಯಕ್ಕೆ ಧಕ್ಕೆ ಬರಬಹುದು

ಕರ್ಕಾಟಕ.... ಧೈರ್ಯ ಕೆಡುತ್ತದೆ. ನಿರುತ್ಸಾಹ ಹೆಚ್ಚಾಗಿರುತ್ತದೆ. ಸಹಸೆ ಅವಶ್ಯಕ, ಆರ್ಥಿಕಸ್ಥಿತಿನೆಟ್ಟಗಿರುವುದಿಲ್ಲ.

ಸಿಂಹ— ಕ್ರೂರ ಗ್ರಹಗಳ ಕಾಲ. ಮನೋವ್ಯಥೆ ಹೆಚ್ಚುತ್ತದೆ. ಪ್ರಯತ್ನ ವಿಫಲವಾಗುವುದು

ಕನ್ಯಾ— ಕರ್ತವ್ಯ ಪರಾಯಣರಾಗಿದ್ದಲ್ಲಿ ಧನಲಾಭವಾಗುತ್ತದೆ. ಖರ್ಚು ಹೆಚ್ಚು. ಆರೋಗ್ಯ ನೆಟ್ಟಗಿರುತ್ತೆ.

ತುಲ— ಅನುಕೂಲ ವಾರ. ಶತ್ರುಗಳು ಮಿತ್ರರಾಗುವರು ಜನರಿಂದ ಗೌರವ ದೊರೆಯುತ್ತದೆ

ವೃಶ್ಚಿಕ....ಮನಸ್ಸಿನಲ್ಲಿ ಸಮಾಧಾನವುಂಟು ಧನಲಾಭವುದೆ ಕಾರ್ಯ ಸಾಧನೆಯಾಗುವುದು

ಧನಸ್ಸು.... ಅನಾರೋಗ್ಯದ ವಾರ, ಧನವ್ಯಯ ಹೆಚ್ಚು, ನಿರುತ್ಸಾಹ ಹೆಚ್ಚು.

ಮಕರ.... ಸತ್ಯಮಾರ್ಗದಲ್ಲಿ ನಡೆದರೆ ಹೆಚ್ಚು. ಹೆಚ್ಚು ಲಾಭದ ಆಶೆಗೆ ಹೋಗಬೇಡಿ

ಕುಂಭ....ಕೀರ್ತಿಯನ್ನು ಹೊಂದುವ ವಾರ ಧನಲಾಭ. ವ್ಯವಹಾರದಲ್ಲಿ ಜಯ.

ಮೀನ.... ದೀರ್ಘಾಲೋಚನೆಯಿಂದ ಕೆಲಸಮಾಡಿ, ಯಾರ ಮಾತಿಗೂ ಮನಗೊಡಬೇಡಿ ಆರ್ಥಿಕ ಸ್ಥಿತಿ ಉತ್ಸಾಹವಾಗಿರುತ್ತದೆ

Woodlands

ಅಮೋಘ 2 ನೇ ವಾರ

ಅಶೋಕಕುಮಾರ್

ವೀರಾ, ಪ್ಯಾರೊ, ಪಾತ್ರಪುಷ್ಪಿರುವ

ಶಿಕಾರಿ

(ಅಮೋಘ ಹಿಂದಿ ಚಿತ್ರ)

ಪ್ರತಿದಿನ 3 ಆಟಗಳು

ಮಹಾಜನರಲ್ಲಿ ಅರಿಕೆ

ಕನ್ನಡ ಸಾಹಿತ್ಯ ಪರಿಷತ್ತು ಬೆಂಗಳೂರು, ಮಹಿಳಾ ಶಾಖೆ ಕಾರ್ಯದರ್ಶಿ ಶ್ರೀ ವೇದವತಿಯವರು ಈ ರೀತಿ ಹೇಳಿಕೆ ಇತ್ತಿದ್ದಾರೆ —

ಪಂಜಾಬಿನಲ್ಲಿ ಕೆಲವು ತಿಂಗಳುಗಳಿಂದ ನಡೆಯುತ್ತಿರುವ ಗಲಭೆಗಳ ಕಾರಣದಿಂದ ಲಕ್ಷಾಂತರ ಭಾರತ ಪ್ರಜೆಗಳು ದೇಶದ ಒಂದು ಪ್ರದೇಶದಿಂದ ಇನ್ನೊಂದು ಪ್ರದೇಶಕ್ಕೆ ವರ್ಗಪಡುವ ಪರಿಸ್ಥಿತಿಯಾಬಗಿ ದಿಕ್ಕಿಲ್ಲದೆ ಸಂಕಟಪಡುತ್ತಿರುವ ಕರುಣಾಜನಕ ಸನ್ನಿವೇಶ ಎಲ್ಲರಿಗೂ ಪತ್ರಿಕೆಗಳ ಮೂಲಕ ತಿಳಿದಿದೆಯಷ್ಟೆ.

ಈ ಅಭಾಗ್ಯ ಪ್ರಜೆಯಲ್ಲಿ ಲಕ್ಷಾಂತರ ಮುಂಡಿ ಹೆಂಗಸರೂ ಮಕ್ಕಳೂ ಸೇರಿದ್ದಾರೆ. ಈ ನಿರಾಶ್ರಿತ ಜನವರ್ಗಕ್ಕೆ ಪರಿಷತ್ತಿನ ಮಹಿಳಾ ಶಾಖೆಯು ಆಶ್ರಯದಲ್ಲಿ ಒಂದು ನಿಧಿಯನ್ನು ಕೂಡಿಸಿ ಕಳಿಸಬೇಕೆಂದು ಸಂಕಲ್ಪ ಮಾಡಿದೆ.

ಮಹಾಜನರೆಲ್ಲ ಯಥಾಶಕ್ತಿ ದ್ರವ್ಯ ದಾನ ಮಾಡಿ ನಿರಾಶ್ರಿತರ ನೋವನ್ನು ಕಡಮೆ ಮಾಡಲು ಅಗತ್ಯವಾದ ಈ ಒಂದು ಸೇವೆಯಲ್ಲಿ ಸಹಕರಿಸಬೇಕಾಗಿ ಪ್ರಾರ್ಥನೆ.

ಸೂಚನೆ— ದೀಪಾವಳಿ ಹಬ್ಬದ ಪ್ರಯುಕ್ತ ನಾಳೆ ಪತ್ರಿಕೆ ಪ್ರಕಟಿಸಲ್ಪಡುವುದಿಲ್ಲ.

At Opera

4 th Glorious Week

MAD-MAN

....with —

N.S.Krishnan, T A Maduram

Edited, Printed and Publishe dby M. S Krishna Rao at the Satyavadi Press Chamaarja Agahar Myrsore.

ಪುದುಕೋಟೆಯಲ್ಲಿ ಕಾಂಗ್ರೆಸ್ ವಿಜಯ

ಪುದುಕೋಟೆ ಸ 8....ಪುದುಕೋಟೆ ರಾಜರು ಕಾಂಗ್ರೆಸ್ ಕೇಳಿಕೆಯನ್ನು ಕೊಡಲು ಅನುಮತಿಸಿದ್ದಾರೆ

ಸ್ವರಾಜ್ಯವು ಕಾಂಗ್ರೆಸ್ಸಿನಿಂದ ಬರಲಿಲ್ಲ

ನಮಗೆ ಸ್ವರಾಜ್ಯವು ಗಾಂಧಿಯಿಂದ, ಕಾಂಗ್ರೆಸ್ಸಿನಿಂದ, ಖದ್ದರು, ರಾಟೆಗಳಿಂದ, ಸತ್ಯ ಅಹಿಂಸೆಗಳಿಂದ, ಸತ್ಯಾಗ್ರಹದಿಂದ ಬರಲಿಲ್ಲ, ಬ್ರಿಟಿಷರು ಕಳೆದ ಎರಡು ಮಹಾ ಯುದ್ಧಗಳಿಂದ ಹೊಂದಿದ ಶೀರದ ನಷ್ಟಗಳಿಂದಲೂ, ಇತರ ದೇಶೀಯರ ಬಲವಂತದಿಂದ ಉಂಟಾದ ಬೇಸರ, ಅಶಕ್ತಿಗಳಿಂದ ತಾಳಲಾರದೆ ದೇಶವನ್ನು ಎರಡಾಗಿ ಕೊಯ್ದು ಅರ್ಧ ಸ್ವರಾಜ್ಯ ಕೊಟ್ಟರಂತೆ. ಇಷ್ಟೇ ಆಗಲಿ, ಕಾಂಗ್ರೆಸ್ಸಿನವರ ಸತ್ಯಾಗ್ರಹಗಳಿಗೆ ಭಯಗೊಂಡು ಅವರು ಕೊಡಲಿಲ್ಲ ಎಂದು ತ್ರಿಲಿಂಗ ಪತ್ರಿಕೆ ಬರೆದಿದೆ.

ಹೈಕೋರ್ಟು ನಿರ್ಧಾರ

ಪುತಾಂತರವನ್ನು ಹೊಂದಿದ ಸ್ತ್ರೀಯ ಆಸ್ತಿಯ ಹಕ್ಕು ಆಕೆಯ ಪೂರ್ವಮತದ ವಾರಸುದಾರರಿಗೆ ಸೇರುವದಿಲ್ಲವೆಂದು [ಮದರಾಸು] ಹೈಕೋರ್ಟಿನ ತೀರ್ಪಾಸ ಬೆಂಗಳೂರು ವಾಸಿ ಕೀ॥ ಶೀ॥ ಸರ್ ಹಾಜೀ ಸೇಟರ ಸೊಸೆ, ಯೂನಸ್ ಸೇಟರ ಹೆಂಡತಿ, ಹಿಂದೆ ಹಿಂದೂ ಮತೀಯಳು. ಆಕೆ ಮಕ್ಕಳಿಲ್ಲದೆ ಸತ್ತುಹೋದಳು. ಆಕೆಯ ಆಸ್ತಿಯು ಹಿಂದೂ ವಾರಂಧರಿಗೆ ಸಲ್ಲದೆಂದೂ, ಸರಕಾರಕ್ಕೆ ಸಲ್ಲುವುದೆಂದೂ ತೀರ್ಮಾನವಾಗಿದೆ [ತ್ರಿ]

ಸಮಸ್ತ ಮಿತ್ರರಿಗೂ, ಹಿತೈಷಿಗಳಿಗೂ

ದೀಪಾವಳಿ ಶುಭಾಶಯಗಳು

ಭಾರತ್ ಕೆಸ್ಟೋರಾಂಟ್, ಮೈಸೂರು.

ಸುದ್ದಿಗಳು

ಶ್ರೀನಗರ ನ 9.... ಕಾಶ್ಮೀರಕ್ಕೊದಗಿದ್ದ ಆಪತ್ತು ತಪ್ಪಿದೆ — ಧಾಳಿಗಾರರು ಹಿಮ್ಮೆಟ್ಟಿದರು.

ಬೊಂಬಾಯಿ ನ 9.... ಜುನಾಘಡ ಸಂಸ್ಥಾನವು ಭಾರತಯೂನಿಗೆ ಸೇರಿತೆಂದೂ, ಸಂಸ್ಥಾನದ ಪ್ರಾರ್ಥನೆಯಂತೆ ಅಲ್ಲಿಗ ಭಾರತ ಯೋಧರು ಪ್ರವೇಶಿಸಿರುವರೆಂದೂ ವರ್ತಮಾನ

ಹೈದರಾಬಾದಿನಲ್ಲಿ ಹಿಂದೂ ಮತ್ತು ಮುಸ್ಲಿಂ ಪೋಲೀಸರಿಗೆ ಹೊಡೆದಾಟ ನಡೆದು ಕೆಲವರು ಗಾಯಗೊಂಡರು

ಬೆಂಗಳೂರು ನ 10— ಆರ್ಕಾಟರು ಡಾ || ಮುಖರ್ಜಿಯವರನ್ನು ಸ್ವಾಗತಿಸಲು ವಿಮಾನ ನಿಲ್ದಾಣಕ್ಕೆ ಒಂದಿದ್ದಾಗ ಆರ್ಕಾಟ್—ಬಾಯ್ 'ಕಾಟ' ಘೋಷಣೆಗಳಾದವು !

ಕಾಶಿ ನ 7 — ಅಂದವಾದ ಕಿಂಕಾಪನ ತೆಳುವಾದ ಸೀರೆ ಮತ್ತು ಆಭರಣಗಳನ್ನು ಎಲಿಜಬೆತ್ ರಾಜಕುಮಾರಿಗೆ ವಿವಾಹ ಕಾಲದಲ್ಲಿ ಉಡುಗೆರೆಯಾಗಿ ಕೊಡುವ ವಸ್ತುಗಳ ಜೊತೆಯಲ್ಲಿ ಸೇರಿಸಲು ಭಾರತ ಮುಖ್ಯಮಂತ್ರಿ ಪಂ. ನೆಹರೂರವರಿಗೆ ಇಲ್ಲಿಯ ಅಧಿಕಾರಿಗಳು ಕಳಿಸಿದ್ದಾರೆ

ಕೊಡಗಿನಲ್ಲಿ ಪಾನನಿರೋಧ ಜಾರಿಗೆ ತರಬಾರದು ಬಡಜನರಿಗೆ ತೊಂದರೆಯಾಗುತ್ತೆ ಎಂದು ಅಲ್ಲೀ ಶಾಸನಸಭೆಯಲ್ಲಿ ಸದಸ್ಯರೊಬ್ಬರು ಕನಿಕರದಿಂದ ವಾದಿಸಿದರಂತೆ !

ಮೈಸೂರು .... ಮಾಸ್ಲಿಸಿಪಲ್ ಕಾಸ್ಸಿಲ್ಲಿನ ಸ್ಪೆಷಲ್ ಮೀಟಿಂಗು ತಾ || 12 ರ ಮಧ್ಯಾಹ್ನ 3 ಗಂಟೆಗೆ ನಡೆಯುವದು.

ಮೈಸೂರು.... ನಿನ್ನೇ ನಡೆದ ಫುಟ್ ಬಾಲ್ ಪಂಥದಲ್ಲಿ ಆರ್ಯನ್ಸ್ 6 ಗೋಲನ್ನೂ, ಮೈಸೂರು ಬಾಯ್ಸ್ 1 ಗೋಲನ್ನೂ ಹೊಡೆದು, ಆರ್ಯನ್ಸ್ ಗೆದ್ದರು

॥ ವಂದೇ ಮಾತರಂ ॥

ಶ್ರೇಷ್ಠವಾದ

ರಾಜಪುರಿ ಹೊಗೇಸೊಪ್ಪಿನಿಂದ

— ತಯಾರಿಸಲ್ಪಟ್ಟದ್ದು —

ಕಾಂಗ್ರೆಸ್

(ರಿಜಿಸ್ಟರ್ಡ್)

ಮಂಗಳೂರು

ಬೀಡಿಗಳು

ಜಿ ಎಸ್. ಟೊಬ್ಯಾಕೊ ವರ್ಕ್ಸ್

ಬಸ್ ಟರ್ಮಿನಸ್, ಮೈಸೂರು.

ತಾ॥ 10-11-47 ॥ಶ್ರೀ॥ ನಂ. 61

"ಪ್ರಬೋಧ"

ಮೈಸೂರು ದೇಶೀಯ ವರ್ಣಾಶ್ರಮ ಸ್ವರಾಜ್ಯ ಸಂಘದ
ಬೋಧಪ್ರದ ಸಪ್ತಾಹಿಕ ಪ್ರಕಟನಮಾಲೆ

ಸಂಪಾದಕ; ಗುಂಡ್ಮಿ ಮಹಾಬಲಭಟ್ಟ, ವೇದಾಂತಶಿರೋಮಣಿ ವೇಗಾರತವಿಶಾರದ
ಸಂಘದ ಕಾರ್ಯದರ್ಶಿ, ದೂರ್ವಾಸಪುರ, ಶಿವಮೊಗ್ಗ ಜಿಲ್ಲೆ

ಜಾತಿವ್ಯವಸ್ಥೆಯ ಭವಿಷ್ಯ

(ಆಚಾರ್ಯ ಪೀಠಾಧಿಪತಿ ಶ್ರೀ ರಾಘವಾಚಾರ್ಯ ಸ್ವಾಮಿಗಳು)

(ಮುಂದುವರಿದುದು)

ಜಾತಿ ಪಂಕ್ತಿತ್ಯೋಟಕ ಮಂಡಲ ಮಿಲನ ಮಂದಿರ ಮುಂತಾದುವುಗಳ ಕಾರ್ಯಕ್ರಮವು ಜಾತಿ ಭೇದವನ್ನು ತೊಡೆಯುವುದೇ ಆಗಿದೆ. ಅಂತರ್ಜಾತಿಯ ಭೋಜನ ಮತ್ತು ವಿವಾಹಗಳಿಗೆ ಪ್ರೋತ್ಸಾಹ ಕೊಡಲಾಗುವುದು. ಹೊಸ ಬೆಳಕಿನ ಲೇಖಕ ಹಾಗೂ ಪತ್ರಕಾರ ಮುಂತಾದವರು ಜಾತಿಭೇದವನ್ನು ಎಲ್ಲ ಅನರ್ಥಗಳಿಗೆ ಮೂಲವೆಂದು ಹೇಳಿ ಅದರ ನಿರ್ನಾಮದಲ್ಲಿಯೇ ದೇಶದ ಹಿತವನ್ನು ಕಾಣುವರು. ಸ್ಕೂಲು ಕಾಲೇಜುಗಳಲ್ಲಿ ಜಾತಿ ವ್ಯವಸ್ಥೆಯನ್ನು ಹೇಯ ದೃಷ್ಟಿಯಿಂದ ನೋಡಲಾಗುವುದು. ಈ ರೀತಿ ಅನೇಕ ದಿಕ್ಕುಗಳಿಂದ ಜಾತಿವ್ಯವಸ್ಥೆಯನ್ನು ಅವ್ಯವಸ್ಥೆಗೊಳಿಸುವ ಪ್ರಯತ್ನ ಮಾಡಲ್ಪಡುತ್ತಿದೆ.

ಅತ್ಯಸನಾತನ ಧರ್ಮದ ಪ್ರೆಸ್ಸುಗಳು ಪ್ಲೇಟ್‌ಫಾರ್ಮುಗಳೂ ಜಾತಿ ವ್ಯವಸ್ಥೆಯ ಪ್ರಾಮಾಣಿಕತೆ ಮತ್ತು ಜಾತಿ ಧರ್ಮದ ಅನುಷ್ಠಾನದ ಸಮರ್ಥನೆಯ ಮಾತ್ರವೇ ಜಾತಿ ಧರ್ಮ ಶಾಸ್ತ್ರಾಯಕ್ತ ಮತ್ತು ವಿಜ್ಞಾನ ಸಮ್ಮತ ವಾದುದೆಂಬುದರಲ್ಲಿ ಸಂದೇಹವಿಲ್ಲ ನಮ್ಮ ಧರ್ಮಗ್ರಂಥಗಳು ಇದರ ವಿಧಾನ ಮಾಡುತ್ತವೆ. ಬ್ರಹ್ಮರ್ಷಿಗಳೂ, ರಾಜರ್ಷಿಗಳೂ, ಮುನಿಗಳೂ, ಆಚಾರ್ಯರೂ, ವಿದ್ವಾಂಸರೂ ಜಾತಿ ಧರ್ಮವನ್ನು ಪಾಲಿಸುವುದು ನಾನವ ಜೀವನಕ್ಕೆ ಅವಶ್ಯಕವಾದುದೆಂದು ದೆಂದು ತಿಳಿಸಿರುವರು. ಅದು ಅದೇಶಾನುಸಾರವಾಗಿ ಹಿಂದೂ ಸಮಾಜದ ಬಹುಮತವು ಇಂದಿಗೂ ಜಾತಿ ವ್ಯವಸ್ಥೆಯಲ್ಲಿ ಶ್ರದ್ಧೆಯಿಡುತ್ತದೆ, ಅದನ್ನು ಅನುಸರಿಸುತ್ತದೆ. ಮತ್ತು ವನ್ನು ಪರಿಯುವುದು ಉಚಿತವಲ್ಲವೆಂದು ತಿಳಿಯುತ್ತದೆ ಭೋಜನ ವಿವಾಹಾದಿಗಳ ವಿಷಯದಲ್ಲಿ ಗ್ಯಾವಿಾಣವನ್ನು ಪೂರ್ಣವಾಗಿ ಜಾತೀಯ ನಿಯಮಗಳನ್ನು ಪಾಲಿಸುತ್ತದೆ ಸಂಸ್ಥಾನಗಳಲ್ಲಿಯಾಪಿ ಭೋಜನದ ಸಂಬಂಧದಲ್ಲಿ ಶಾಗ್ಲೀಷ್ ಕಲಿತ ಸಮಯದಲ್ಲಿ ಸ್ವೈರಾಚಾರವು ಕಂಡು ಬರುತ್ತದಾದರೂ

ಹಿಂದೂ ಧರ್ಮರಕ್ಷಣೆಗಾಗಿ ದುಡಿಯುತ್ತಿರುವ ಶ್ರೀ ಶಂಕರಾಚಾರ್ಯರು

ಪ್ರತ್ಯಕ್ಷ ರೂಪದಲ್ಲಿ ವಿವಾಹದ ಸಂಬಂಧದಲ್ಲಿ ನಾಗರಿಕ ಜನತೆಯು ಹೆಚ್ಚು ಕಡಿಮೆ ಸಾವಿಂಕ್ಕೆ 999 ರಷ್ಟು ಜಾತೀಯ ನಿಯಮಗಳನ್ನು ಪಾಲಿಸುತ್ತದೆ ಜಾತೀಯ ಸಂಸ್ಥೆಗಳು ತಮ್ಮ ತಮ್ಮ ಸಂಘಟನೆಯ ಶತ್ರ ಅಭ್ಯುದಯದ ಸಲುವಾಗಿ ಪ್ರಯತ್ನಶೀಲಗಳಾಗಿರುವುದು ಕಂಡು ಬರುತ್ತದೆ.

ಆದುದರಿಂದ ನಿಕಟ ಭವಿಷ್ಯದಲ್ಲಿ ಜಾತಿಭೇದವು ಸಮೂಸ್ಮಾದೀತೆಂಬ ದು ಸಂಭವನವಾಗಿ ತೋರಿಬರುವುದಿಲ್ಲ ಹಿಂದೂ ಸಮಾಜವು ಜಾತಿಗಳ ಸಮೂಹವಾಗಿದೆ. ಈ ಜಾತಿಗಳು ಈಗಲೂ ಇವೆ. ಮುಂದೆಯೂ ಇರುವುವು. ಆದರೆ ಸಾಂಪ್ರದಾಯಿಕ ವಿದ್ವೇಷವು ಮತ್ತು ಜಾತಿ ಧರ್ಮದ ಅನುಷ್ಠಾನದ ದೆಸೆಯಿಂದ ನಮ್ಮ ಸಾಮಾಜಿಕ ಉನ್ನತಿಯು ಮಾರ್ಗವು ಕಂಟಕಾಕೀರ್ಣವಾಗಿ ತೋರುವುದು. ಸಾಮಾನ್ಯವಾಗಿ ಎಲ್ಲಾ ಜಾತಿಗಳೂ ತಮ್ಮ ತಮ್ಮ ಜಾತಿ ಧರ್ಮದಿಂದ ಚ್ಯುತವಾಗದೆ ಹೋಗುತ್ತಿವೆ. ಬ್ರಾಹ್ಮಣ ಜಾತಿಯಲ್ಲಿ ಎಷ್ಟು ಜನರು ತಮ್ಮ ಜಾತಿ ವೃತ್ತಿಯಲ್ಲಿ ಸ್ಥಿರರಾಗಿರುವರು? ಇತರ ಜಾತಿಗಳಲ್ಲಿಯೂ ಕೂಡ ಯಾವನು ಯಾವ ವೃತ್ತಿಯನ್ನು ಅವಲಂಬಿಸಿದನೆಂದು ತಿಳಿಯುವನೋ. ಅವನ್ನು ಸ್ವೀಕರಿಸುತ್ತಾ ಹೋಗುತ್ತಿರುವನು. ಇದರ ಪರಿಣಾಮವು ಜಾತಿ ವ್ಯವಸ್ಥೆಗೆ ಭಂಗಕರವಾಗುತ್ತಾ ಇದೆ. "ಉ ತತ್ಸಾದ್ಯಂತೆ ಜಾತಿಧರ್ಮಾಃ ಕುಲಧರ್ಮಾಶ್ಚ ಶಾಶ್ವತಾಃ" ಅಂದರೆ ಜಾತಿಧರ್ಮಗಳೂ ಕುಲಧರ್ಮಗಳೂ ಉಚ್ಚಿನವಾಗುತ್ತಾ ಹೋಗುತ್ತಿವೆ. ಇತಿಹಾಸ ಪುರಾಣಗಳಲ್ಲಿ ಘೋರ ಕಲಿಯುಗದ ವರ್ಣನೆ ಮಾಡುತ್ತಾ, ಹೀಗೆ ಹೇಳಲಾಗಿದೆ — 'ಬ್ರಾಹ್ಮಣಾಃ ಶೂದ್ರ ಕರ್ಮಾಣಃ ತಥಾ ಶೂದ್ರಾ ಧನಾರ್ಜಿತಾಃ | ಕ್ಷತ್ರಧರ್ಮೇಣ ವೈಶ್ಯಸ್ಯ ವರ್ತಯಂತಿ ಯುಗಕ್ಷಯೇ ॥ ನ ತದಾ ಬ್ರಾಹ್ಮಣಃ ಕಶ್ಚಿತ್ ಸ್ವಧರ್ಮ ಮನುಪಜೀವತಿ | ಕ್ಷತ್ರಿಯಾಶ್ಚಾಪಿ ವೈಶಾಶ್ಚ ವಿಕರ್ಮಸ್ಥಾ ನಂಧಿಪ ॥ ಚತ್ವಾರೋಪ್ಯೇ ಪಿ ತಥಾ ವರ್ಣಾಃ ಸಂಕೀರ್ಯಂತೆ ಪರಸ್ಪರಂ | ಶೂದ್ರ ತುಲ್ಯಾ ಭವಿಷ್ಯಂತಿ ತಪಸೇತ್ಯ ವನುಜ್ಜತಾಃ ॥" (ಮಹಾಭಾರತ) ತಾತ್ಪರ್ಯವೇನೆಂದರೆ ಕಲಿಯುಗದ ಅಂತಿವ ದಿನಗಳಲ್ಲಿ ಬ್ರಾಹ್ಮಣರು ಶೂದ್ರರ ಕರ್ಮಮಾಡತೊಡಗುವರು ಮತ್ತು ಶೂದ್ರರು ವೈಶ್ಯರ ಅಥವಾ ಕ್ಷತ್ರಿಯರ ವೃತ್ತಿಯನ್ನು ಪರಿಗ್ರಹಿಸುವರು. ಆಗ ಯಾವ ಬ್ರಾಹ್ಮಣನೂ ತನ್ನ ಧರ್ಮವನ್ನು ಪಾಲಿಸುವುದಿಲ್ಲ ಮತ್ತು ಕ್ಷತ್ರಿಯರೂ ವೈಶ್ಯ ಜನರೂ ತಮ್ಮ ಕರ್ಮಗಳನ್ನು ತ್ಯಜಿಸುವರು. ನಾಲ್ಕು ವರ್ಣಗಳಲ್ಲಿ ಪ್ರತಿಲೋಮ ಸಂಬಂಧಗಳಾಗುವುವು ಅವುಗಳಿಂದ ವರ್ಣಸಂಕರ ಸೃಷ್ಟಿಯಾಗುವುದು. ಸಮಸ್ತ ಮಾನವ ಜಾತಿಯು ತಪಸ್ಸನ್ನೂ ಸತ್ಯವನ್ನೂ ಪರಿತ್ಯಜಿಸಿ ಶೂದ್ರಸದೃಶ್ಯವಾಗಿ ಹೋಗುವುದು.

ನಾವು ಕಲಿಯುಗದ ಐದು ಸಾವಿರ ವರ್ಷಗಳು ಏತ್ರವೇ ಕಳೆದಿದೆಯಷ್ಟೇ. ಆದರೆ ಈಯೆಲ್ಲಾ ಸಂಗತಿಗಳೂ ಪ್ರತ್ಯಕ್ಷವಾದಂತೆ ಕಂಡು ಬರುತ್ತಿವೆ. ಯಾರು ತಮ್ಮ ಧರ್ಮವನ್ನು ಅನುಸರಿಸಲಿಚ್ಛಿಸುವರೋ, ಅವರನ್ನು ಸಮಯದೊಟ್ಟಿಗೆ ನಡೆಯಲು ಬಲವಂತಪಡಿಸಲಾಗುತ್ತಿದೆ ಆದರೆ ಹೀಗೆ ಮಾಡುವುದು ಮನುಷ್ಯತ್ವಕ್ಕೆ ವಿರುದ್ಧವಾದದು. ಸಮಯದೊಟ್ಟಿಗೆ ತನ್ನ ಆದರ್ಶವನ್ನೂ, ತನ್ನ ಕರ್ತವ್ಯವನ್ನೂ ತ್ಯಜಿಸಿ ಕಾಲದ ಪ್ರವಾಹದಲ್ಲಿ ತೇಲಿಹೋಗುವುದು ಅನಾರ್ಯತ್ವವೇ ಸರಿ. ಭಗವಾನ್ ಗೀತಾಚಾರ್ಯನು — 'ಸ್ವಧರ್ಮೇ ನಿಧನಂ ಶ್ರೇಯಃ ಪರಧರ್ಮೋ ಭಯಾವಹಃ' — ಅಂದರೆ ಸ್ವಧರ್ಮದಲ್ಲಿ ಸಾಯುವುದರಿಂದಲೂ ಕಲ್ಯಾಣವಾಗುತ್ತದೆ ಮತ್ತು ಪರಧರ್ಮವು ಭಯಾವಹವಾಗಿರುತ್ತದೆ ಎಂದು ಆದೇಶ ವಿತ್ತಿರುವನು. ಆದುದರಿಂದ ಪ್ರತಿಯೊಬ್ಬ ವ್ಯಕ್ತಿಯ ಕರ್ತವ್ಯವು ಅವನವನ ಧರ್ಮವನ್ನು ಪಾಲಿಸುವುದೇ ಆಗಿದೆ ಯುಗವು ತನ್ನ ಪ್ರಭಾವವನ್ನು ತೋರಿಸುತ್ತಾ ಇರಲಿ. ಆದರೆ ನ್ಯಶಧಾರಿಗಳಾದ ಕರ್ತವ್ಯನಿಷ್ಠರು ತಮ್ಮ ಧರ್ಮದಿಂದ ಚ್ಯುತರಾಗಬಾರದು. ಅಶಾವಾದಿಗಳಾಗಿ ನಾವು, ಯಾವಾಗಹಿಂದೂ ಸಮಾಜದ ಪ್ರತಿಯೊಬ್ಬ ವ್ಯಕ್ತಿಗೂ ತನ್ನ ಜಾತಿಗನುಸಾರವಾಗಿ ತನ್ನ ಧರ್ಮದಲ್ಲಿ ದೃಢವಾಗಿರುವನೋ, ಆಗಲೇ ನನ್ನ ಕಳೆದು ಹೋದ ಗೌರವವು ನಮಗೆ ಪುನಃ ಪ್ರಾಪ್ತವಾಗುವುದೆಂದು ತಿಳಿಯುತ್ತೇನೆ.

(ಸಶೇಷ)

Save the Cow

ಗೋ ವಧೆ ನಿಲ್ಲಲಿ

ಔರ್ವ ಮುಸ್ಲಿಂ ಸ್ತ್ರೀಗಾಗಿ

ಕುರಿಗ್ರಾಮ ಎಂಬಲ್ಲಿ ಸಿವಿಲ್ ಮತ್ತು ಕ್ರಿಮಿನಲ್ ನ್ಯಾಯಾಸ್ಥಾನವು ಸೇರಿತ್ತು. ಕೋರ್ಟಿನ ಅಧಿವೇಶನ ನಡೆಯುತ್ತಿರುವಾಗಲೇ ಅನಿರೀಕ್ಷಿತವಾಗಿ 12 ಜನ ಸಶಸ್ತ್ರ ತಂಡವೊಂದು ಅಲ್ಲಿಗೆ ಬಂದು, ಔರ್ವ ಮುಸ್ಲಿಂ ಸ್ತ್ರೀಯೊಬ್ಬಳನ್ನು ಅಲ್ಲಿಂದ ಸೆಳೆದೊಯ್ಯಲು ಯತ್ನಿಸಿತು. ಅದೇ ಕೋರ್ಟಿಗೆ ಆ ಹೆಂಗುಸಿನ ಸೊಡನೆ, ಅವಳದೇ ಜಾತಿಯ ಇತರ ಅಪ್ಸರೂ ಬಂದಿದ್ದರು. ಆ ಸ್ತ್ರೀಗಾಗಿ ಇತ್ತಂಡದವರೊಳಗೆ ಖಾಡಾಖಾಡಿಯಾಗವುದಿತ್ತು. ಎರಡು ಕಡೆಯವರೂ ಅಕೆ ತಮ್ಮ ಕಡೆಯ ಔರ್ವನ ಪತ್ನಿಯೆಂದು ಸಿದ್ಧಪಡಿಸಲು ಯತ್ನಿಸುತ್ತಿದ್ದರು. ಈ ಕಥೆಯು 'ಹಿಂದೂಸ್ತಾನ್ ಸ್ಟೆಂಡಾರ್ಡ್' ಪತ್ರಿಕೆಯಲ್ಲಿ ಪ್ರಕಟವಾಗಿದೆ

ಂ ಂ

ಪಾಕಿಸ್ತಾನಕ್ಕಿಂತ ಮರಣ ವಾಸಿ

ಮುಸ್ಲಿಂ ಸ್ತ್ರೀಯೋರ್ವಳು ಪಾಕಿಸ್ತಾನದಲ್ಲಿ ಹೋಗಿ ನೆಲಸುವುದಕ್ಕಿಂತ ಮರಣ ವಾಸಿ ಎಂದು ಅದಿನ್ನು ಮುದ್ದಿಸಿದ ಕರ್ಣಕಠೋರ ವಾರ್ತೆ' ಬಾಂಬೆ ಕ್ರಾನಿಕಲ್' ಪತ್ರಿಕೆಯಲ್ಲಿ ಪ್ರಕಟವಾಗಿದೆ. ಅವಳ ಗಂಡ ಔರ್ವ ಕಾರ್ಖಸ್ಟೇಬಲ್. ಆತ ಪಾಕಿಸ್ತಾನದಲ್ಲಿ ಹೋಗಿ ನೆಲಸುವ ಮನೋಗತವನ್ನು ವ್ಯಕ್ತಪಡಿಸಿದ ಆವರೆ ಅವನ ಪತ್ನಿಗೆ ತನ್ನ ಮಮತೆಯ ತಾಯ್ನೆಲವನ್ನು ಬಿಟ್ಟು ಹೋಗುವ ಮನಸ್ಸಿಲ್ಲ. ಅಕೆಯು ವಿರೋಧವನ್ನು ಅವಳ ಪತಿ ಮನ್ನಿಸಲಿಲ್ಲ ಅದೊಂದು ದಿನ ಬೆಳಿಗ್ಗೆ ತನ್ನ ಪತಿಯು ಪಾಸಿಸುವ ಪೋಲೀಸ್ ಲೈನಿನಲ್ಲೇ ಅಕೆ ಕುತ್ತಿಗೆಗೆ ಹಗ್ಗ ಬಿಗಿದು ಆತ್ಮಹತ್ಯೆ ಮಾಡಿಕೊಂಡ ದೃಶ್ಯ ಕಂಡುಬಂತು

ಂ ಂ

ಸಿಂಧ್ ಕ್ರೈಸ್ತರು ಭಾರತಕ್ಕೆ

ನವಾಬ್ ಷಾದಿಂದ ('ಸಿಂಧ್' ಪ್ರಾಂತ್ಯದಲ್ಲಿ) ಸುಮಾರು ಸಾವಿರ ಮಂದಿ ಕ್ರೈಸ್ತರು ಮನೆಮಾರುಗಳನ್ನು ತೊರೆದು ಭಾರತ ಯೂನಿಯನ್ನಿನಲ್ಲಿರುವ ಬೇರೆ ಬೇರೆ ಸ್ಥಳಗಳಿಗೆ ಹೋಗಿರುವರು. ಬೆಂಗಳೂರಿನ ಬಿಷಪರು ಬೆಂಗಳೂರಿನಲ್ಲಿ ಇತ್ತೀಚಿಗೆ ಒಂದು ಕ್ರೈಸ್ತ ಸಭೆಯನ್ನು ಉದ್ದೇಶಿಸಿ ಭಾಷಣ ಮಾಡುವಾಗ ಈ ವಿಷಯ ತಿಳಿಯಪಡಿಸಿದರು. ಪಾಕಿಸ್ತಾನದಲ್ಲಿ ಚಿತ್ರ ಹಿಂಸೆ ಅನುಭವಿಸಬೇಕಾದೀತೆಂಬ ಬೆದರಿಕೆಯಿಂದ ಕ್ರೈಸ್ತರು ಈ ಧೋರಣೆ ವಹಿಸಿದರೆಂದೂ ಬಿಷಪ್ಪರು ತಿಳಿಸಿದ್ದಾರೆ. (ಸ)

ಅಖಿಲ ಭಾರತ ಮುಸ್ಲಿಂ ಲೀಗ್ ಸತ್ತು ಹೋಯಿತು

ಜ || ಜಿನ್ನಾರವರು ಅಧ್ಯಕ್ಷರಾಗಿರುವ ಮುಸ್ಲಿಂಲೀಗು ಭಾರತ ಮುಸ್ಲಿಂ ಲೀಗಿನವರ ಮೇಲೆ ಹತೋಟಿ ಇಟ್ಟುಕೊಳ್ಳುವ ಹಾಗಿಲ್ಲ ಅಖಿಲ ಭಾರತ ಮುಸ್ಲಿಂ ಲೀಗು ಸತ್ತುಹೋಯಿತು

— ಎಂದು ಸಂಯುಕ್ತ ಪ್ರಾಂತ್ಯ ಶಾಸನ ಸಭೆಯಲ್ಲಿ ಮುಸ್ಲಿಂಲೀಗಿನ ಉಪನಾಯಕ ಜ || ಖಾರಿ ಘೋಷಿಸಿದರು

ಕಾಶ್ಮೀರ ಆಕ್ರಮಣ ಬಗೆಗೆ ಅವರು ಮುಂದವರಿಯುತ್ತಾ, ಹಳೆಯ ನಿರಂಕುಶ ಘನ ವ್ಯಕ್ತಿಗಳ ವಿಷಯದಲ್ಲಿ ಸಹಾನುಭೂತಿಯಿಲ್ಲ ಎಂದು ತಿಳಿಸಿದರು

ಪ್ರಜಾಪ್ರಭುತ್ವದ ಈ ಸುದಿನಗಳಲ್ಲಿ ಹೈದರಾಬಾದ್ ನಿಜಾಂ ಮತ್ತು ಕಾಶ್ಮೀರ ರಾಜರು ಪರಿವರ್ತರಾಗಬೇಕು ಎಂದವರು ಹೇಳಿದರು

ಭಾರತ ಮುಸ್ಲಿಂರು ವಸಾಹತಿಗೆ ವಿಧೇಯರಾಗಿರುವರೆಂದು ಅವರು ತಿಳಿಸಿದರು

ಂ ಂ

ಶಿವಾಜಿ ಮಿಠಾಯಿ ಬುಟ್ಟಿಯ ಪುನರಾಗಮನ

ಲಿಸ್ಬನ್ ಹತ್ತಿರ ಒಂದು ರೊಟ್ಟಿಯ ಕಾರ್ಖಾನೆಯ ಬಾಗಿಲಲ್ಲಿ ಒಬ್ಬ ಹೆಂಗಸು ರಂಬಾಟಿ ಹೂಡಿದಳು. ಒಳಗೆ ತನ್ನನ್ನು ಬಿಟ್ಟುಹೋಗಿರುವ ಗಂಡಸಿದಾನೆಂದೂ, ಅವನ ಮೇಲೆ ಸೇಡು ತೀರಿಸಿಕೊಳ್ಳುವೆನೆಂದೂ ಜನರಿಗೆ ಹೇಳಿದಳು. ಸಂಜೆಗೆ ಒಳಗೆ ಒಳಗಿನ ಜನರೆಲ್ಲ ಒಬ್ಬೊಬ್ಬರೇ ಹೊರಬಿದ್ದು ಹೋದರು. ರೊಟ್ಟಿ ಬುಟ್ಟಿಗಳೂ ಪೆಟ್ಟಿಗೆಗಳೂ ಹೋದವು ಗಂಡ ಮಾತ್ರ ಹೊರಗೆ ಬರಲೇ ಇಲ್ಲ. ಪಾಪ ಗಂಡನು ಒಂದು ರೊಟ್ಟಿ ಬುಟ್ಟಿಯಲ್ಲಿ ಕುಳಿತು ಪಾರಾಗಿಹೋಗಿ ಹೆಂಡತಿಗೆ ಪುಂಕುಬೂದಿ ಹಚ್ಚಿಬಿಟ್ಟ (ಲೊ)

ಂ ಂ

ಅರಸನಿಗೆ ಅಂತ್ಯ ಎಚ್ಚರಿಕೆ

ಪುದುಕೋಟೆ ಮಹಾರಾಜರಿಗೆ ಅಲ್ಲಿಯ ಕಾಂಗ್ರೆಸ್ ಕಡೇ ಎಚ್ಚರವಿತ್ತು 15 ನೇ ತಾರೀಕಿನೊಳಗೆ ಜವಾಬ್ದಾರಿ ಸರ್ಕಾರ ಸ್ಥಾಪಿಸದಿದ್ದರೆ ಸತ್ಯಾಗ್ರಹ ಹೂಡುವುದಾಗಿ ತಿಳಿಸಿದ್ದಾರೆ

ವಿವಿಧ ವರ್ತಮಾನ

ಶ್ರೀನಗರ ನ 4 — ಶ್ರೀನಗರವು ಬಹು ಭದ್ರವಾದ ಕೊಟೆ ಕೊತ್ತಲಿಂತೆ ಮಾಡಲ್ಪಟ್ಟು ಸುತ್ತಲು ಕಾವಲು ಏರ್ಪಡಿಸಲಾಗಿದೆ

ಂ ಂ

ಇಂದಿನವರೆಗೆ 1000 ಮಂದಿ ಹತರಾಗಿರುವರೆಂದೂ, ಆ ಸವರದ ಸಿಟಿಗಾಲ್ ಮಂಡಿ ಮತ್ತು ಚಿಕಾಲ್‌ಗುಡದ ಭೋಗಗಳು ಅಗ್ನಿಪ್ರಕರಣಕ್ಕೆ ಪಾಹುತಿಯಾಗಿರಿಯಿಟ್ಟಿದ್ದು, ಆ ಅಗ್ನಿ ಜ್ವಾಲೆಯು ಹೈದರಾಬಾದು ರೈಲ್ವೇ ಸ್ಟೇಷನ್ನಿಗೆ ಕಾಣುತ್ತಿರುವುದೆಂದ ಪ್ರಕಟವಾಗಿದೆ.

ಂ ಂ

ಉತ್ತರ ಆಕಾರ್ಟಿನ ರೈತ ಸಂಮೇಳನದಲ್ಲಿ ಅಕ್ಕಿ ರೇಷ್ ವಜವಾಗಬೇಕೆಂಬ ತೀರಾವಾಗಿದೆ

ಂ ಂ

ಬರ್ಮಾ ಅಂಗಸಾರ್ ಕೊಲೆಪಾತಕ ಮಾಜಿಪ್ರಧಾನಿ ಯು ಸಾರವರ ಅಸ್ಥಿಯನ್ನು ಅತನ ರಕ್ಷಣೆಬಗ್ಗೆ ಮೋರಲಿದಾರೆ

ಂ ಂ

ಪ್ರಸಿದ್ಧ ವಿನೋದ ನಟ ಚಾರ್ಲಿಯವರು ರಜತ ಪಟನನ್ನು ತ್ಯಜಿಸಿ ಜುನಾಗಡ ನವಾಬರ ಸೆಕ್ರಟರಿ ಪದವಿಯನ್ನು ಸ್ವೀಕರಿಸಿದ್ದಾರಾಗಿ ವಿಶ್ವಾಸನೀಯವಾಗಿ ತಿಳಿದುಬಂದಿದೆ. ಚಾರ್ಲಿ ಜುನಾಗಡದ ನಿವಾಸಿಯಾಗಿದ್ದವನು. ಲಕ್ಷ್ಮೀ ಪ್ರೊಡಕ್ಷ್ನ್‌ದವರ 'ಕುಂವಾರ ಪತಿ' ಎಂಬ ಚಿತ್ರದಲ್ಲಿ ನಟಿಸುವರೆ ಕರಾರು ಮಾಡಿದ ಚಾರ್ಲಿಯು ಈಗ ನಟಿಸಲು ನಿರಾಕರಿಸಿದ್ದಾನೆ ಜುನಾಗಡದಿಂದ ಪರತ ಬರುವುದಿಲ್ಲವೆಂದೂ ತಿಳಿಸಿದಾರೆ.

ಂ ಂ

ಬೆಲ್ಗ್ರೇಡ್ ನ 4—ನ್ಯೂಯಾರ್ಕ್ ಟೈಮ್ಸ್ ಪತ್ರಿಕೆಯ ಪತ್ರಿಕೋದಾರರಾದ ಮಿ|| ಬ್ರೈಡಾಲರು ಮತ್ತು ಅವರ ಪತ್ನಿಯವರು 24 ಗಂಟೆಗಳೊಳಗೆ ಜುಗೋಸ್ಲೊವಿಯ ಬಿಟ್ಟು ಹೊರಡಬೆಕೆಂದು ಮಂತ್ರಿಮಂಡಲ ಆಜ್ಞೆ ಮಾಡಿದೆ, ಅವರ ಲೇಖನಗಳೇ ಈ ಗಡಿಪಾರು ಆಜ್ಞೆಗೆ ಕಾರಣವಂತೆ.

ಂ ಂ

ಹೈದರಾಬಾದಿನ ತಾಲಾ ಕಾಲೇಜುಗಳ 15 ಸಾವಿರ ವಿದ್ಯಾರ್ಥಿಗಳು, ಮುಷ್ಕರ ಹಿಡಿದಿದ್ದಾರೆ.

‡ ಸ್ವತಂತ್ರ ಪಟಾಣಿ ಸ್ಥಾನ ಬಳುವಳಿ ಮಟ್ಟಹಾಕಲು ಪಾಕೀಸ್ತಾನ ಕಾಶ್ಮೀರ ಆಕ್ರಮಣ ಆರಂಭಿಸಿತು

‡ ಪಾಕೀಸ್ತಾನ ಪಾಪರ್ ಆಗಿದೆ ಬ್ರಿಟಿಷರಂತೆ ಲಂಚವೀಯಲು ಯೋಗ್ಯತೆ ಇಲ್ಲ ವಿರೋಧತೆ ಹೊಂದಬಾರದು ಎಂದು ಕಾಶ್ಮೀರ ಆಕ್ರಮಣಕ್ಕೆ ಪಾಕೀಸ್ತಾನ ಪ್ರೇರೇಪಿಸಿತು

† ಪಾಕೀಸ್ತಾನವಿಷ್ಟು ಅರಿಯಲಿ, ಕಾಶ್ಮೀರ ಕೊನೆರಕ್ತದ ವರೆಗೂ ಹೋರಾಟ ಹೂಡುವುದು

† ಪಾಕೀಸ್ತಾನ ಕದನ ನಿಲ್ಲಿಸಿದರೆ ಕಾಶ್ಮೀರದಲ್ಲಿಯೆ ಪಾಕೀಸ್ತಾನ ಗೋರಿ ಶತಸ್ಸಿದ್ಧ

— ಕಾಶ್ಮೀರ ಸಿಂಹ ಷೇಕ್ ಅಬ್ದುಲ್ಲ ಘರ್ಜಿಸಿದ್ದಾರೆ

ನಾಗಪುರ ನ 4— ಅಗಸ್ಟ್ ಗಲಭೆ ಸಂಬಂಧದಲ್ಲಿ ವಸೂಲ್ಮಾಡಿದ್ದ ಜುಲ್ಮಾನೆಗದನ್ನು ವಾಪಸ್ಸು ಸೂಡಲು ಮಧ್ಯ ಪ್ರಾಂತ್ಯ ಸರಕಾರ ನಿರ್ಧರಿಸಿದೆ.

ಂ ಂ

ಜುಹೂರ ರಾಜ ನೂರಜಹಾರ್ ಇತ್ಯಾದಿ ನಟನಟಿಯರು ಪಾಕೀಸ್ತಾನದಲ್ಲಿ ಚಿತ್ರ ಕೈಗಾರಿಕೆಯನ್ನು ಪ್ರಾರಂಭಿಸಲಿದ್ದಾರೆ

ಂ ಂ

ನವದೆಹಲಿ ನ 5....ಸ್ವತಂತ್ರ ವಾಣಿಜ್ಯ ಸ್ಥಾನದ ಸರ್ಕಾರ ಕಾಬೂಲಿನಲ್ಲಿ ಸ್ಥಾಪಿತವಾಗಿದೆ

ಂ ಂ

ಬೊಂಬಾಯಿ, ನ 5 — ಗೋವಾದಿಂದ ಜುನಗಡಕ್ಕೆ ಶಸ್ತ್ರಾಸ್ತ್ರಗಳು ಹೋಗುತ್ತಿದ್ದು, ಭಾರತ ವಿರುದ್ಧ ಪ್ರಚಾರ ನಡೆಯುತ್ತಿದೆಯೆಂದು ಹೇಳಲಾಗಿದೆ.

ಂ ಂ

ಮಾಧವ್ ಎಂಬ ಬಸ್ ಕಂಡಕ್ಟರನ್ನು ಹಜಾ ಮಾಡಿದ ಪ್ರಯುಕ್ತ ಮದ್ರಾಸಿನ ಬಸ್ ಕೆಲಸಗಾರರು ಮುಷ್ಕರ ಆರಂಭಿಸಿದ್ದಾರೆ.

ಹೈದರಾಬಾದು

ವಸಾಹತಿಗೆ ಅಡಕವಾಗುವ ಮತ್ತು ಆಂತರ್ಯ ಸುಧಾರಣೆ ಬಗೆಗೆ ನಿಜಾಂ ಹೈದರಾಬಾದು ಅತ್ಯಹತ್ಮ ನೀತಿಯನ್ನು ಅನುಸರಿಸುತ್ತಿದೆ. ಸ್ವೇಚ್ಛಾ ರೀತಿಯಲ್ಲಿ ದಬ್ಬಾಳಿಕೆಯನ್ನು ಜರುಗಿಸುತ್ತಿರುವ ಆ ಸಂಸ್ಥಾನವನ್ನು ಎಚ್ಚೆರಿಸುತ್ತೇನೆ. ತಿರುವಾಂಕೂರು ಮತ್ತು ಮೈಸೂರು ಪರಿಸ್ಥಿತಿ ಏನಾಯಿತು ಎಂಬುದನ್ನು ನಿಜಾಂ ದೊರೆ ಗಮನಿಸಲಿ ! ಹೈದರಾಬಾದ್ ಭಾರತ ವಸಾಹತಿಗೆ ಶಿರೋವೇದನೆಯೆನ್ನುಂಟು ಮಾಡಿದೆ ಆ ವಿಷಯ ಎಷ್ಟು ಸತ್ಯವೋ, ಅಷ್ಟೇ ತೊಡಕನ್ನೂ ಉಂಟು ಮಾಡಿದೆ. ಆದರೆ ಅವುಗಳ ನಿವಾರಣೆ ಅತ್ಯಂತ ಸುಲಭವಿದೆ. ಏಕೀಕರಣವೇ ಅದಕ್ಕೆ ಸಂಜೀವನ

—ಹೀಗೆಂದು ಅಖಿಲ ಭಾರತ ಸಂಸ್ಥಾನಿ ಪ್ರಜಾಪರಿಷತ್ತಿನ ಉಪಾಧ್ಯಕ್ಷರಾದ ಡಾ || ಪಟ್ಟಾಭಿ ಸೀತಾರಾಮಯ್ಯ ಮದರ್ತ್ರಸಿನಿಂದ ನಿಜಾಂ ಪ್ರಭುವನ್ನು ಎಚ್ಚರಿಸಿದ್ದಾರೆ.

ಭಾರತ ಸರ್ಕಾರವೇ ! ಮುಂಬಯಿ ಮಂತ್ರಿ ಮಂಡಲವೇ !! ಮದರಾಸು ಪ್ರಭುತ್ವವೇ !!! — ಹಿಂದೂ ಪ್ರಜಾಕೋಟಿ ಜಗಿಗೆ ಅಸಕ್ತಿಮುನ್ನು ತಾಳಿ ಹೈದರಾಬಾದು ವಿಷಯದಲ್ಲಿ ಪ್ರವೇಶಿಸಿ ! ಹಿಂದೂಗಳ ವಿರುದ್ಧ ಶಸ್ತ್ರ ಮಾರ್ಗದಲ್ಲಿ ನಿರತರಾಗಿರುವ ಮುಸಿವರಿಂದ, ಸ್ವಸಹಾಯಕರ್ತ್ಯರಾಗಿರುವ ಹಿಂದೂಗಳನ್ನು ರಕ್ಷಿಸಿ. ಮಾನವ ದಯಾಭಾವನೆಯಿಂದ ಮಾಡುವ ಈ ಪವಿತ್ರ ಕಾರ್ಯ ವಿಪರೀತಾಧಿಕಾರವೆಂದು ತೋರುವುದಿಲ್ಲ

— ಹೀಗೆಂದು ಅಖಿಲ ಭಾರತ ಹಿಂದೂಮಹಾಸಭಾಧ್ಯಕ್ಷ ಶ್ರೀ ಭೂಪಟ್ಕರ್ ಅಗ್ರಹಪೂರ್ವಕ ಹೇಳಿಕೆಯಿತ್ತಿದ್ದಾರೆ

ಹೈದರಾಬಾದಿನಲ್ಲಿ ಸ್ವದೇಶ ರಕ್ಷಣೆಗೆ ಎಂದು ನಿಜಾಂ ಪ್ರಭುತ್ವ ಮಧ್ಯ ಏಷ್ಯಾತ್ಯ ಮತ್ತು ಬೇರೆಕಡೆಗಳಿಂದ ಬಂದ ಮುಸ್ಲಿಂ ನಿರಾಶ್ರಿತರನ್ನು ಪೋಲೀಸ್ ಪಡೆಗೆ ಸೇರಿಸುತ್ತಿರುವುದಂತೂ ಅಲ್ಲಿನ ಹಿಂದೂಗಳಿಗೆ ಒಹು ಭೀತಿಯನ್ನುಂಟು ಮಾಡಿದೆ.

ಇದೇ ರೀತಿಯ ಅತ್ಯಾಚಾರ, ಲೂಟಿ, ಭೀತಿ, ಗೂಂಡಾಗಿರಿ ನಡೆದರೆ ಒಹು ಸಂಖ್ಯಾಕರಾದ ಹಿಂದೂಗಳು ನಾಮಾವಶೇಷವಾಗುವರು.

ವಿಟೋಫೆರಿನ್

ಟ್ರೇಡ್ ITL ಮಾರ್ಕ್

ಎ. ಬಿ ಡಿ ವಿಟಮಿನ್ನುಗಳು ಮತ್ತು ದೇಹಪೋಷಣೆಗೆ ಬೇಕಾದ ಮುಖ್ಯ ಖನಿಜಗಳು. ಭಟ್ಟಿಇಳಿಸಿದ ರಸಾಗಿ ಮತ್ತು ಜೀರ್ಣಿಸುವ ಇವುಗಳನ್ನೊಳಗೊಂಡು ತಯಾರಿಸಲ್ಪಟ್ಟ ಟಾನಿಕ್ ಔಷಧಿ ವಿಟೋಫೆರಿನ್ ಸೇವನೆಯಿಂದ ಮಕ್ಕಳ ಬೆಳವಣಿಗೆಗೂ ಕಾಯಿಲೆಯಿಂದ ಎದ್ದು ಗುಣಮುಖರಾಗುತ್ತಿರುವವರಿಗೂ, ಗರ್ಭಿಣಿ ಮತ್ತು ಬಾಣಂತಿಯರ ಪೋಷಣೆಗೂ ಅನುಕೂಲವಾಗುವುದು.

" ವಿಟೋಫೆರಿನ್ " ಜಾಯಿಲೆ ಒಡಂತೆ ನೋಡಿಕೊಳ್ಳುವ ಮನೆಯ ಕಾವಲುಗಾರ.

ಎಲ್ಲಾ ಪ್ರಮುಖ ಔಷಧಿವ್ಯಾಪಾರಿಗಳಲ್ಲಿಯೂ ಸುಲಭ ಬೆಲೆಗೆ ದೊರೆಯುವುದು.

— ತಯಾರಿಕರು —

The Mysore Industrial & Testing Laboratory Ltd.

Malleswaram P. O. Bangalore

ಭವತಿ ಭಿಕ್ಷಾಂದೇಹಿ !!

.... ನಮ್ಮ ಪಡಿತರ ಪಂಡಿತರು ಹಾಕಿರುವ ಕೂಗು.

ಜೋಳಿಗೆ ಆಳ

.... 10 ಸಾವಿರ ಪಲ್ಲಕ್ಕಿಂತ ಹೆಚ್ಚು ಭತ್ತ ಹಿಡಿಸುತ್ತೆ.

ನಗರವಾಸಿಗಳ ಕರ್ತವ್ಯ

.... ಹೊಟ್ಟೆ ಹಿಡಿದು ಕೊಟ್ಟು ಸಹವಾಸಿಗಳಿಗೆ ತುತ್ತೊದಗಿಸಬೇಕಾದುದು.

ಕನಸು - ನನಸು

.... ಹೊಟ್ಟೆ ತುಂಬಾ ಅನ್ನ ಹಾಕುತ್ತೇವೆ

— ಕಾಂಗ್ರೆಸ್ ನಾಯಕರ ನಿಷ್ಠಿನ ನುಡಿ.

.... ಅದನ್ನು ಕೇಳಿದ ಜನಸ್ತೋಮ ನಿನ್ನೆ ರಾತ್ರಿ ಸಹ ಕನಸಿನಲ್ಲಿ ತೇಗಿತು.

ಜನರಿಗೆ ಎಚ್ಚರಿಕೆ

.... ಕನಸಿನ ತೇಗಿಗೆ ಕಸಾಣರಾದ ಕಾಂಗ್ರೆಸ್ಸಿಗರೇ ಈಗ ಅನ್ನ ಮಂತ್ರಿ !

.... ಜನರೇ ! ಎಚ್ಚರವಾಗಿ ! ಹೊಟ್ಟೆ ತುಂಬಿಕೊಳ್ಳಲು ತುತ್ತಿಗೆ ಬಾಯೊಡ್ಡಿ !

ಶ್ರೀ 'ಓಂ' ಗುರುತಿನ

ಅರಿಸಿದ ಪರಿಶುದ್ಧ ಕೇಸರಿ

ಈ ಶ್ರೀ ಓಂ ಗುರುತಿನ ಕೇಸರಿಯು ಗ್ಯಾರಂಟಿಯಾಗಿ ಪರಿಶುದ್ಧವಾದುದು. ಸ್ಪೇನ್ ದೇಶದಲ್ಲಿಯು ಕೇಸರಿ ಗಿಡಗಳಿಂದ ಅರಿಸಲ್ಪಟ್ಟ ಹೂಗಳಿಂದ ಕಿತ್ತಲ್ಪಟ್ಟು ಅರಿಸ ತೆಗಯಲ್ಪಟ್ಟಿದಾಗಿದೆ. ಇದರಲ್ಲಿ ವಿನೆರೆದು ಆಕ್ಷೇಪಣೀಯ ಪದಾರ್ಥವೂ ಸೇರಿಲ್ಲ ಮತ್ತು ಧಾರ್ಮಿಕವಾಗಿಯೂ ಪರಿಶುದ್ಧವಾಗಿದೆ. ದೇವಾಲಯಗಳಲ್ಲಿಯೂ ದೇವರ ಪೂಜೆಗೂ ಮತ್ತು ಮಂಚಾಚಾರ ಸಮಾರಂಭಗಳಲ್ಲಿಯೂ ಎಲ್ಲ ಸಂತೋಷ ಮತ್ತು ಸಾಂಘಿಕ ಕೂಟಗಳಲ್ಲಿಯೂ ಉಪಯೋಗಿಸಲ್ಪಡತಕ್ಕದ್ದಾಗಿದೆ. ಎಂದು ಶಿಫಾರಸ್ ಮಾಡಲ್ಪಟ್ಟಿದೆ

ವಲ್ಲಭದಾಸ್ ತೇಜ್‌ಪಾಲ್

(ಹಿಂಗು. ಕೇಸರಿ ಮತ್ತು ಕಿರಾಣ ವ್ಯಾಪಾರಿಗಳು)

ಗೋವಿಂದಪ್ಪ ನಾಯಕ್ ಥಸ್ರ್, ಜಿ. ಟಿ. ಮದರಾಸು